

**ನಮ್ಮಲ್ಲಿ ಲಂಚ ತಗೊಳ್ಳೋದು ಅಫೆನ್ಸ್ ಅಲ್ಲ. ಜನ ಪ್ರೀತಿಯಿಂದ ಕೊಡೋದು ಭಕ್ಷೀಸ್ ಆಗುತ್ತೆ. ಪ್ರತಿ ತಿಂಗಳು ಕಂತು ಕಟ್ಟೋದು ಹಫ್ತಾ. ನಿತ್ಯ ಮಾಡೋ ಫುಟ್‌ಪಾತ್ ವಸೂಲಿಗೆ ರೋಲ್‌ಕಾಲ್ ಅಂತೀವಿ. ಲಂಚಕ್ಕೆ ಅನೇಕ ಮುಖಗಳಿವೆ. ಆದ್ರೆ ಇಲ್ಲಿ ಒಂದು ಬೇಸಿಕ್ problem ಇದೆ. ಒಂದು ಸ್ಟೇಷನ್‌ಗೂ ಇನ್ನೊಂದು ಸ್ಟೇಷನ್‌ಗೂ ಲಂಚ ಕೇಳೋದರಲ್ಲಿ ವ್ಯತ್ಯಾಸ ಬರಬಾರ್ದು. ಕಳ್ಳನ್ನ ಬಿಡಬೇಕಾದ್ರೆ ಒಬ್ರು ಒಂದು ಸಾವಿರ ರೂಪಾಯಿ ತಗೋತಾರೆ. ಇನ್ನೊಂದು ಸ್ಟೇಷನ್‌ನಲ್ಲಿ ಹತ್ತು ಸಾವಿರ ರೂಪಾಯಿ ಕೇಳ್ತಾರೆ. ಯುನಿಫಾರ್ಮಿಟಿ ಇಲ್ಲ.**

ಪಡೆಯೋದು ಅವನ ಧರ್ಮ. ನಮ್ಮ ದೇಶದಲ್ಲಿ ಎಲ್ಲ ಪಕ್ಷಗಳ ಬೆಂಬಲ ಇದಕ್ಕೆ ಇದೆ.'

'ಸ್ವಾಮೀಜಿ, ರೈಡ್ ಮಾಡಿದಾಗ ಹಣ ಸಿಕ್ರೆ ಏನು ಮಾಡ್ತೀರ?'

'ಗುಡ್ ಕ್ವಶ್ಚನ್! ನಮ್ಮಲ್ಲಿ ನೂರು ಕೋಟಿವರೆಗೆ ನಗದು ಸಿಕ್ರೆ ಎಕ್ಸ್‌ಕ್ಯೂಸ್ ಮಾಡ್ತೀವಿ. ಇನ್ನೂರು ಕೋಟಿ ಆದ್ರೆ ರೀಸನ್ ಕೇಳ್ತೀವಿ. ಮುನ್ನೂರು ಕೋಟಿ ಸಿಕ್ಕಾಗ ಮಾತ್ರ ಆಕ್ಷನ್ ತಗೋತೀವಿ. ಕೇಸ್‌ನ ಕಮಿಟಿಗೆ ಒಪ್ಪಿಸ್ತೀವಿ. ಕಮಿಟಿ ಮೆಂಬರ್ಸ್ ಅಂದ್ರೆ ಹೆಚ್ಚು ಲಂಚ ಪಡೆದು ಅಭ್ಯಾಸ ಇರೋವರು.'

'ಕೇಸ್ ಹಿಡಿದ ಸುದ್ದಿ ಪೇಪರ್‍ರಲ್ಲಿ ಬರುತ್ತೆ, ಆಮೇಲೆ ಏನಾಯ್ತೋ ಗೊತ್ತಾಗೊಲ್ಲವಲ್ಲ?'

'ಇದು Universal truth. ನಿಮ್ಮಲ್ಲಿ ಈವರೆಗೆ ಎಷ್ಟು ಸಾವಿರ ಕೇಸುಗಳು ಬುಕ್ ಆಗಿವೆ? ಅವುಗಳಲ್ಲಿ ಪೆಂಡಿಂಗ್ ಎಷ್ಟು? ತೊಂಬತ್ತೊಂಬತ್ತು ಪರ್ಸೆಂಟ್ ಪೆಂಡಿಂಗಲ್ಲಿವೆ ಅನ್ನಬಹುದು. ಕೋಟಿ ಕೋಟಿ ಹಗರಣಗಳಾದ್ವು. ಬಟ್ ನೋ ಆಕ್ಷನ್, ನೋ ಪನಿಷ್‌ಮೆಂಟ್!'

'ಸ್ವಾಮೀಜಿ, ನಿಮ್ಮ ದೇಶದಲ್ಲಿ ಲಂಚ ರೆಗ್ಯುಲರೈಸ್ ಮಾಡಿರೋದು ತುಂಬಾ ಸಂತೋಷ ಆಯ್ತು' ಎಂದಳು ವಿಶಾಲು.

'ನಾವಿನ್ನೂ ಲಿಸ್ಟ್ ಆಗಿಲ್ಲ. ಲಂಚ ಪಡೆಯೋ ದೇಶಗಳನ್ನ ನೆಟ್ಟಲ್ಲಿ ಲಿಸ್ಟ್ ಮಾಡಿದ್ದಾರೆ. No ಲಂಚ ಡೆನ್ಮಾರ್ಕ್ ಆದ್ರೆ, only ಲಂಚ ಸಿರಿಯಾ ಆಗುತ್ತೆ. ಮಿಡ್ಲಲ್ಲಿ ಇಂಡಿಯಾ ಬರುತ್ತೆ. ಲಂಚದ ವರ್ಲ್ಡ್‌ನಲ್ಲಿ ಇಂಡಿಯಾದು 80ನೇ ಪೊಸಿಷನ್ನು. ನಾಟ್ ಬ್ಯಾಡ್.'

'ಹೌದು ಸ್ವಾಮೀಜಿಯವರೇ, ನಿಮ್ಮಲ್ಲಿ White Topping ವ್ಯವಸ್ಥೆ ಇದೆಯಾ?'

'ಮಿನಿಸ್ಟರ್ರು ಎಲೆಕ್ಟ್ ಆಗಿ ಬಂದಾಗ ಅವರಿಗೆ ಕ್ವಾರ್ಟರ್ಸ್ ಅಲಾಟ್ ಮಾಡ್ತೀವಿ. ರೂಮ್ಸ್ ಅಲಾಟ್ ಮಾಡ್ತೀವಿ, ಹಾಗೇ ರೋಡ್ಸ್ ಅಲಾಟ್ ಮಾಡ್ತೀವಿ. ಹಂಡ್ರೆಡ್ ಮಿನಿಸ್ಟರ್ಸ್ ಇದ್ರೆ ಹಂಡ್ರೆಡ್ ರೋಡ್ಸು ಅವರದು. Every year ಅಲ್ಲಿ White Topping ಮಾಡಬಹುದು. ರೋಡು ಇರೋದೇ ವೈಟ್ ಟಾಪಿಂಗ್ ಮಾಡೋಕೆ!'

'ಇದನ್ನ ತಪ್ಪಿಸೋಕಾಗೊಲ್ವಾ ಸ್ವಾಮೀಜಿ?'

'ಜನಗಳಲ್ಲಿ ಅವೇರ್‌ನೆಸ್ ಬರಬೇಕು. ಗಟ್ಸ್ ಇರಬೇಕು. ನಮ್ಮನೆ ಮುಂದೆ ಬಂದು ಕಾಂಟ್ರ್ಯಾಕ್ಟರ್ ರಸ್ತೆ ಅಗೆಯೋವಾಗ ಯಾಕೆ ಅಗೀತಿದ್ದೀಯ ಅಂತ ಯಾರೂ ಕೇಳೊಲ್ಲ. ಎಷ್ಟು ಕೋಟಿ ಕಾಂಟ್ರ್ಯಾಕ್ಟ್ ಇದು ಅಂತ ಅವನೂ ಹೇಳೊಲ್ಲ. ಖರ್ಚಾಗ್ತಿರೋದು ನಮ್ಮದೇ ಟ್ಯಾಕ್ಸ್ ದುಡ್ಡು.'

ವಿಶ್ವನಿಗೆ ಜ್ಞಾನೋದಯವಾಯಿತು.

'ಅಂದ್ರೆ ನಾಗರಿಕರು ಪ್ರಶ್ನೆ ಮಾಡೋಕೆ ಶುರು ಮಾಡಿದ್ರೆ ಈ ಭ್ರಷ್ಟಾಚಾರ ತಡೀಬಹುದಾ?'

ಸ್ವಾಮೀಜಿ ಮತ್ತೆ ನಕ್ಕರು.

'Yes. You are correct. ನಾವು ಪ್ರಶ್ನೆ ಮಾಡ್ಬೇಕು. ಕಾಮಗಾರಿ ಯಾವಾಗ ಶುರು ಮಾಡ್ತೀಯಾ? ಯಾವಾಗ ಮುಗಿಸ್ತೀಯಾ? ಮೆಟೀರಿಯಲ್‌ಗೆ ಎಷ್ಟು ಖರ್ಚಾಗುತ್ತೆ ಅಂತ ಪಬ್ಲಿಕ್ ಕೇಳ್ಬೇಕು.'

'ಸ್ವಾಮೀಜಿ, ಕಡೇ ಪ್ರಶ್ನೆ. ನಿಮ್ಮಲ್ಲಿ ಒಂದ್ಸಲ ಎಂಎಲ್‌ಎ ಆದ್ರೆ ಕಡೇವರೆಗೂ ಪೆನ್ಷನ್ ಸಿಗೋ ಸ್ಕೀಂ ಇದೆಯಾ?'

'ನಮ್ಮಲ್ಲಿ ಸ್ಕೀಂ ಇನ್ನೂ ಚೆನ್ನಾಗಿದೆ. ಕೇವಲ ಎಂಎಲ್‌ಎ ಒಬ್ಬ ಅಲ್ಲ. ಅವನ ಪರಿವಾರ, ಡ್ರೈವರ್ರು, ಕೆಲಸಗಾರರು, ಅವನ ಆಫೀಸು, ಲೇಡಿ ಸೆಕ್ರೆಟರಿ. ಹತ್ತು ಜನಕ್ಕೆ ಈ ಪೆನ್ಷನ್‌ನ ಸೌಲಭ್ಯ ಲೈಫ್‌ಲಾಂಗ್ ವಿಸ್ತರಿಸ್ತೀವಿ. ತೆಪ್ಪಗೆ ಟ್ಯಾಕ್ಸ್ ಕೊಡೋಕೆ ಜನ ಒಪ್ಪಿರೋವಾಗ ಖರ್ಚಿಗೆ ನಾವು ದಾರಿ ಮಾಡಬೇಕು.'

'ಸ್ವಾಮೀಜಿ, ನಿಮ್ಮಲ್ಲಿ ಎಲ್ಲಕ್ಕೂ ಪರ್ಮಿಶನ್ ಇದೆಯಾ?'

'ಲೈಫ್ ಇರೋದೇ ಎಂಜಾಯ್ ಮಾಡೋಕೆ. 24 ಕೋಟಿ ಜೀವರಾಶಿಗಳಲ್ಲಿ ಮನುಷ್ಯ ಅಂದರೆ ಒಬ್ಬನೇ. Not even Chimpanzee or Gorilla. ಎಂಜಾಯ್ ಮಾಡೋಕೆ ಭಗವಂತ ನಮ್ಮನ್ನ ಭೂಮಿಗೆ ಕಳಿಸಿರೋವಾಗ ನಾವು ಬಿ.ಡಿ. ಸೇದಬೇಕು, ಸಿ.ಡಿ. ಮಾಡಬೇಕು. ನಮ್ಮಲ್ಲೂ ಐ.ಎ.ಎಸ್. ಇದೆ. ಇಂಗ್ಲಿಷವರ ಕಾಲದಲ್ಲಿ ಅದರ ಅರ್ಥ ಬೇರೆ ಇತ್ತು. ಆದ್ರೆ ಈಗ I.A.S.ಗೆ ಅರ್ಥ I am Safe ಅಂತ ಆಗಿದೆ. ಅವನು ಏನು ಮಾಡಿದರೂ ಸೇಫ್.'

ಆ ವೇಳೆಗೆ ಅನೌನ್ಸ್‌ಮೆಂಟ್ ಕೇಳಿ ಬಂತು. 'ಫ್ಲೈಟು ಸಿದ್ಧವಾಗಿದೆ. ಬೋರ್ಡಿಂಗ್ ಶುರುವಾಗಿದೆ' ಅಂತ ಸಂಖ್ಯೆ ಹೇಳಿದರು. ಸ್ವಾಮೀಜಿಗಳ ಪಾದಕ್ಕೆ ವಿಶ್ವ, ವಿಶಾಲು ನಮಿಸಿದರು.

'ನಾಗರಹಾವು ಕಚ್ಚದಿದ್ರೂ ಓಕೆ, ಆದರೆ ಆಗಾಗ ಭುಸ್ ಅಂತಿರಬೇಕು. ಇಲ್ಲಾಂದ್ರೆ ಕಲ್ಲು ಹೊಡೆದು ಸಾಯಿಸ್ತಾರೆ. ದೇವರ ಹಾಗೆ ಟ್ಯಾಕ್ಸ್ ಕಟ್ಟಿರೋ ಪಬ್ಲಿಕ್‌ಗೆ ಇದನ್ನು ಅರ್ಥ ಮಾಡ್ಸಿ' ಎಂದು ಆಶೀರ್ವದಿಸಿದರು.



ಪ್ರತಿಕ್ರಿಯಿಸಿ: feedback@sudha.co.in